

ಮಹಾ ಕಾವ್ಯಗಳ ದೃಶ್ಯ ರೂಪಕ

ಅಕ್ಷರದ ಹಂಗು ತೊರೆದು.....



ಹರಿಹರ ಮಹಾಕವಿಯ

ಗಿರಿಜಾ ಕಲ್ಯಾಣ

ಮತ್ತು

ರಾಘವಾಂಕ ಕವಿಯ

ಹರಿಶ್ಚಂದ್ರ ಚಾರಿತ್ರ

ನಿರೂಪಣೆ : ಜಿ. ಕೃಷ್ಣಪ್ಪ

ಚಿತ್ರಗಳು : ಶಿವಣ್ಣ ಜಿ.ಕೆ.

‘Maha Kavyagala Drushya Rupaka’ collection of art works
By Shivanna G.K.
email: shivannagk@gmail.com.

First print: 2015
No of Pages: 28
cover : 170 gsm,art paper.
Used Paper: 90 gsm, art paper.
Price: Rs.200

Printed at : Ganga Prints, Kurubarahalli, Bengaluru-86

Published by: **‘WE FIVE’** No,599, 4th cross, 7th main road, Poornachandra Layout, Srigandhadakaval, Bengaluru-91



ಚಿತ್ರಗಳಲ್ಲಿ ಮಹಾಕಾವ್ಯಗಳು

- ಗುಡಿಹಳ್ಳಿ ನಾಗರಾಜ
ಸಂಪಾದಕರು

ಅಕ್ಷರದ ಹಂಗು ತೊರೆದು...

ಮಹಾಕಾವ್ಯಗಳ ಪಾತ್ರಗಳು ಜನತೆಯ ಕಲ್ಪನೆಯಲ್ಲಿವೆ. ಆ ಕಲ್ಪನೆ ಗರಿಗಟ್ಟಿಕೊಳ್ಳಬೇಕಾದರೆ, ಪಾತ್ರಗಳ ಆಕಾರ, ರೂಪು, ವೇಷಭೂಷಣ ಅವರ ಮನಸ್ಸಿನಲ್ಲಿ ಮೈದಾಳಬೇಕು. ಪಾತ್ರಗಳು ಹೀಗೇ ಇದ್ದಿರಬೇಕು ಎಂದು ಅವುಗಳ ಆಕಾರ ಮತ್ತು ರೂಪವನ್ನು ನಮ್ಮ ನಾಟಕ, ಬಯಲಾಟಗಳು ಕಡೆದಿಟ್ಟಿವೆ. ಅವರಿಗೆ ಪ್ರೇರಣೆ ನಮ್ಮ ಚಿತ್ರ ಕಲಾವಿದರು. ಶ್ಯಾಮ ವರ್ಣದ ಕೃಷ್ಣ ಎಂದು ಕವಿ ಬಣ್ಣಿಸಿದರೆ, ಆ ವರ್ಣನೆಯನ್ನು ಮೀರಿಸುವ ಹಾಗೆ ಕೃಷ್ಣನ ಚಿತ್ರ ರಚಿಸಿಬಿಡುತ್ತಾನೆ ಕಲಾವಿದ. ಕವಿ ಎಂದರೆ ಅಚಿತ ರೂಪಕ್ಕಿಳಿಸುವ ಸಾಕ್ಷರಸ್ಥ ಕವಿಯೇ ಎಂದಲ್ಲ. ಅದಕ್ಕೂ ಪೂರ್ವದಲ್ಲಿ ಮೌಖಿಕ ಸಂಪ್ರದಾಯದಲ್ಲಿ ತಲೆಮಾರಿನಿಂದ ತಲೆಮಾರಿಗೆ ಹೊತ್ತು ತಂದ ಜಾನಪದ ಕವಿಯೂ ಸೇರುತ್ತಾನೆ.

ಮೌಖಿಕವಾಗಿ ಹರಿದುಬಂದ ಮಹಾಕಾವ್ಯ ಪರಂಪರೆಗೆ- ಚಿತ್ರಕಲೆ, ನಾಟಕಗಳು ಕೂಡಿಕೊಂಡು ಜನತೆಯ ಮನಸ್ಸಿನಲ್ಲಿ ಪಾತ್ರಗಳು ಅಚ್ಚೊತ್ತಿಬಿಟ್ಟಿವೆ. ಅಕ್ಷರ ರೂಪದ ಕಾವ್ಯ ನಂತರದ ಸೇರ್ಪಡೆ. ಆದರೆ ಅಕ್ಷರವೇ ಆದಿ ಎಂದು ನಾವು ಭಾವಿಸಿದ್ದೇವೆ. ಚಿತ್ರಗಳೂ ಮಹಾಕಾವ್ಯವನ್ನು ಕಟ್ಟಿಕೊಡಬಲ್ಲವು. ಆ ಕಾರಣಕ್ಕೇ ಈ ಗ್ರಂಥ ವಿಶೇಷವಾಗಿದೆ. ಇಲ್ಲಿ ಚಿತ್ರಗಳು ಕನ್ನಡದ ಎರಡು ಮಹಾನ್ ಕಾವ್ಯಗಳನ್ನು ಮರು ರೂಪಿಸಿವೆ. ಚಿತ್ರಗಳ ಮೂಲಕ ಮಹಾಕಾವ್ಯಗಳನ್ನು ಓದುವ ಬಗೆ, ಅರಿಯುವ ಬಗೆಗೆ ಈ ಪುಸ್ತಕ ಮಾದರಿಯಾಗಿದೆ.



ಹರಿಹರ ಮಹಾಕವಿಯ 'ಗಿರಿಜಾ ಕಲ್ಯಾಣ' ಮತ್ತು ರಾಘವಾಂಕ ಕವಿಯ 'ಹರಿಶ್ಚಂದ್ರ ಚಾರಿತ್ರ' ಎಂಬ ಎರಡು ನಡುಗನ್ನಡದ ಮಹಾಕಾವ್ಯಗಳನ್ನು ಬೇಂದ್ರೆ ಕೃಷ್ಣಪ್ಪ ಎಂದೇ ಪ್ರಖ್ಯಾತರಾದ ಡಾ.ಜಿ.ಕೃಷ್ಣಪ್ಪನವರು 'ಸುಧಾ' ಜನಪ್ರಿಯ ವಾರಪತ್ರಿಕೆಯ ಓದುಗರಿಗೆ ಸರಳಗನ್ನಡದಲ್ಲಿ ಉಣಬಡಿಸಿದ್ದರು. 2012ರ ಡಿಸೆಂಬರ್ 6ರಿಂದ- 2013 ಜನವರಿ 24ರ ವರೆಗೆ 8 ವಾರಗಳ ಕಾಲ 'ಗಿರಿಜಾ ಕಲ್ಯಾಣ' ಧಾರಾವಾಹಿಯಾಗಿ ಪ್ರಕಟವಾಯಿತು. 2014ರ ಅಕ್ಟೋಬರ್ 23ರಿಂದ- ಡಿಸೆಂಬರ್ 18ರ ವರೆಗೆ 9 ವಾರಗಳ ಕಾಲ 'ಹರಿಶ್ಚಂದ್ರ ಚಾರಿತ್ರ' ಧಾರಾವಾಹಿಯಾಗಿ ಮೂಡಿಬಂತು. ಬಹಳ ಒಳ್ಳೆಯ ಪ್ರತಿಕ್ರಿಯೆ ಈ ಎರಡು ಧಾರಾವಾಹಿಗಳಿಗೆ ಓದುಗರಿಂದ ವ್ಯಕ್ತವಾಗಿತ್ತು. ಪ್ರಾತಿನಿಧಿಕವಾಗಿ ಓದುಗರ ಮೆಚ್ಚುಗೆಯ ಕೆಲವು ಪತ್ರಗಳನ್ನು ಮಾತ್ರ ಕೊನೆಯಲ್ಲಿ ಪ್ರಕಟಿಸಿದ್ದೇವೆ.

ಮೂಲಕ್ಕೆ ಚ್ಯುತಿ ತಾರದಂತೆ, ಚಿಕ್ಕಚಿಕ್ಕ ವಾಕ್ಯಗಳಲ್ಲಿ ಕೃಷ್ಣಪ್ಪನವರು ಕಟ್ಟಿಕೊಟ್ಟ ಕನ್ನಡದ 'ಪ್ರಿಸೈಜ್' ಭಾಷೆಗೆ ಓದುಗರು ಮಾರು ಹೋಗಿದ್ದರು. ಕೃತಿಗಳ ಅಪ್ಪಟ ಸೊಗಡು ಓದುಗರಿಗೆ ಪರಿಚಯವಾಗಲಿ ಎಂದು ಕೆಲವು ಮೂಲದ ಪದಗಳನ್ನು ಉಳಿಸಿಕೊಂಡು, ಅವುಗಳ ಭಾವಾರ್ಥ ಸಮೇತ ಕೊಡುವ ಪರಿಶ್ರಮವನ್ನು 'ಸುಧಾ' ಸಂಪಾದಕೀಯ ಬಳಗ ನಿಭಾಯಿಸಿದಾಗ ಓದುಗರ ಮೆಚ್ಚುಗೆಯ ಮಹಾಪೂರವೇ ಹರಿದಿತ್ತು. ರಗಳೆಯ ಕವಿ ಎಂದೇ ಖ್ಯಾತರಾದ ಹರಿಹರ 'ಗಿರಿಜಾ ಕಲ್ಯಾಣ' ರಚಿಸಿರುವುದು ಚಂಪೂ ಕಾವ್ಯದಲ್ಲಿ. ರಾಘವಾಂಕ ಕವಿಯ 'ಹರಿಶ್ಚಂದ್ರ ಚಾರಿತ್ರ' ಮೊಟ್ಟ ಮೊದಲ ಬಾರಿಗೆ ಷಟ್ಪದಿಯಲ್ಲಿ ರಚಿತವಾದ ಮಹಾಕಾವ್ಯ. ಈ ಎರಡೂ ನಡುಗನ್ನಡದ ಕಾವ್ಯಗಳು ಇಂದಿನ ಕನ್ನಡದಲ್ಲಿ ಕೃಷ್ಣಪ್ಪನವರಿಂದ ಸೊಗಸಾಗಿ ಮೂಡಿಬಂದಿದ್ದವು. ಜಿ.ಕೃಷ್ಣಪ್ಪನವರು ಒಬ್ಬ ಅಪರೂಪದ ವ್ಯಾಖ್ಯಾನಕಾರರು ಮತ್ತು ವಿಮರ್ಶಕರು. ಕವಿ ದ.ರಾ. ಬೇಂದ್ರೆ ಸಾಹಿತ್ಯವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿ, ಬೇಂದ್ರೆ ಕಾವ್ಯದ ಅರ್ಥೈಸುವಿಕೆ ಮತ್ತು ಪ್ರಸಾರದಲ್ಲಿ ತೊಡಗಿಸಿಕೊಂಡಿರುವ ಬಹುದೊಡ್ಡ ಪರಿಚಾರಕರು. ಸ್ವಂತ ಆಸಕ್ತಿ ಮತ್ತು ಪರಿಶ್ರಮದಿಂದ ಏಕವ್ಯಕ್ತಿಯೊಬ್ಬರು ಇಷ್ಟು ದೊಡ್ಡ ಪರಿಚಾರಿಕೆಯಲ್ಲಿ ತೊಡಗಿಕೊಂಡಿರುವ ಉದಾಹರಣೆ ಬಹುಶಃ ಕನ್ನಡದ ಮಟ್ಟಿಗೆ ಇದೊಂದೇ. 'ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ -ಒಂದು ಅಧ್ಯಯನ' ಕೃಷ್ಣಪ್ಪನವರ ಮಹಾಪ್ರಬಂಧದ ವಿಷಯವಾದರೆ, 'ಬರಹದಲ್ಲಿ ಬೇಂದ್ರೆಯವರ ಬದುಕು', 'ಹೂತದ ಹುಣಸಿ', 'ನಾಕು ತಂತಿ- ಒಂದು ಟಿಪ್ಪಣಿ' ಸೇರಿದಂತೆ ಹತ್ತಕ್ಕೂ ಹೆಚ್ಚು ಪುಸ್ತಕ ಹೊರತಂದಿದ್ದಾರೆ. ಮಹಾಕಾವ್ಯಗಳನ್ನು ಸರಳ ಆಡುಗ್ರಾಂಥಿಕ ಭಾಷೆಯಲ್ಲಿ ಕಟ್ಟಿಕೊಟ್ಟ ಕಾರಣಕ್ಕೂ ಅವರು ಚಿರಕಾಲ ನೆನಪಿನಲ್ಲುಳಿಯುತ್ತಾರೆ. ಪ್ರಸ್ತುತ ಸಂದರ್ಭದ ಆಡುಗನ್ನಡಕ್ಕೆ ಒಗ್ಗಿಸಿಕೊಂಡ ಕೃಷ್ಣಪ್ಪನವರ ಸಮರ್ಥ ಅನುವಾದ (ಅಥವಾ ಮರುಸೃಷ್ಟಿ)ಯನ್ನು ಓದುಗರು ಒಪ್ಪಿಕೊಂಡ ಹಾಗೆಯೇ ಪೂರಕವಾಗಿ ರಚಿಸಲಾಗಿದ್ದ ಚಿತ್ರಗಳಿಗೂ ಅವರು ಮನಸೋತಿದ್ದರು. ಹೆಸರಾಂತ ಚಿತ್ರ ಕಲಾವಿದ ಜಿ.ಕೆ.ಶಿವಣ್ಣ ರಚಿಸಿದ ಚಿತ್ರಗಳನ್ನು ಮನಸಾರೆ ಅಭಿನಂದಿಸಿದರು.



ಶಿವಣ್ಣ ಜಿ.ಕೆ. ಜಲವರ್ಣ ಹಾಗೂ ರೇಖಾಚಿತ್ರಗಳ ರಚನೆಯಲ್ಲಿ ಅಗ್ರಗಣ್ಯರು. ಚಿತ್ರಕಲಾ ಜಗತ್ತಿನ ದಂತಕತೆಯಾದ ಆರ್.ಎಂ.ಹಡಪದ ಅವರ ಶಿಷ್ಯರಾಗಿ ಕೆನ್ ಕಲಾ ಶಾಲೆಯಲ್ಲಿ ಚಿತ್ರಕಲೆಯನ್ನು ಅಭ್ಯಸಿಸಿರುವ ಇವರು ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನ ಕೋನಿಗರಹಳ್ಳಿಯವರು. ಗ್ರಾಮೀಣ ಪ್ರತಿಭೆಯಾದ ಶಿವಣ್ಣ ಚಿತ್ರಕಲಾ ಕ್ಷೇತ್ರದಲ್ಲಿ ಇಂದು ದೊಡ್ಡ ಹೆಸರು. 1983ರಿಂದ ಇಲ್ಲಿವರೆಗೆ ಅವರು 20ಕ್ಕೂ ಅಧಿಕ ಏಕವ್ಯಕ್ತಿ ಚಿತ್ರ ಪ್ರದರ್ಶನಗಳನ್ನು ಏರ್ಪಡಿಸಿದ್ದಾರೆ. ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಸಮೂಹ ಚಿತ್ರ ಪ್ರದರ್ಶನ, ಸ್ಥಳದಲ್ಲೇ ಚಿತ್ರರಚನೆ, ಪ್ರಾತ್ಯಕ್ಷಿಕೆಗಳನ್ನು ನಡೆಸಿಕೊಡುವಲ್ಲಿಯೂ ಪಳಗಿರುವ ಕಲಾವಿದ ಶಿವಣ್ಣನವರು. ನೂರಾರು ಕತೆ, ಕಾದಂಬರಿ, ಕವನ, ಸಂಶೋಧನಾ ಗ್ರಂಥಗಳಿಗೆ ಸಾವಿರಾರು ಬಣ್ಣದ ಹಾಗೂ ರೇಖಾ ಚಿತ್ರಗಳನ್ನು ರಚಿಸಿ ಅದ್ವಿತೀಯರೆನಿಸಿದ್ದಾರೆ. ವಚನಗಳಿಗೆ ಚಿತ್ತಾರ ರಚಿಸಿರುವ ಅವರ 'ವಚನ ಚಿತ್ತಾರ' ಒಂದು ಅಪೂರ್ವ ಗ್ರಂಥ. ವಚನ ಮತ್ತು ಚಿತ್ರಗಳ ಮುಖಾಮುಖಿಯ ಹೊಸತನದೊಂದಿಗೆ ಮೂಡಿ ಬಂದ ಕನ್ನಡದ ಮೊದಲ ಕೃತಿ.

ಭಾರತೀಯ ಜಲವರ್ಣ ಪದ್ಧತಿಯಲ್ಲಿ ಬಿಳಿ ಮತ್ತು ಕಪ್ಪು ವರ್ಣಗಳ ಬಳಕೆ ನಿಷಿದ್ಧ. ಇದು ನಿಜವಾಗಿಯೂ ಕಲಾವಿದರಿಗೆ ಸವಾಲಿನ ಕೆಲಸ. ಕಾಗದದ ಬಿಳಿಯನ್ನು ಉಳಿಸಿಕೊಂಡೇ ಚಿತ್ರರಚನೆಯಾಗಬೇಕು. ಕಪ್ಪು ಬಣ್ಣದ ಬದಲಿಗೆ ನೀಲಿ ಮತ್ತು ಕೆಂಪು ಬಣ್ಣಗಳ ಮಿಶ್ರಣದಿಂದಾದ ಗಾಢಕಂದನ್ನು ಬಳಸಲಾಗುತ್ತದೆ. ಅತ್ಯಂತ ತಿಳಿಯಾದ ವರ್ಣಗಳಿಂದಲೇ ಚಿತ್ರ ಆರಂಭವಾಗಬೇಕು. ನೇರವಾಗಿ ಎಲ್ಲೂ ಕಡು ಬಣ್ಣಗಳನ್ನು ಬಳಸುವಂತಿಲ್ಲ. ಬಳಸಿದರೆ ಮತ್ತೆ ಅದನ್ನು ತಿಳಿಗೊಳಿಸುವುದು ಅಸಾಧ್ಯ. ಹಾಗಾಗಿ ನವಿರಾದ ವರ್ಣಗಳಿಂದ ದಟ್ಟ ವರ್ಣಗಳ ಕಡೆ ಹೋಗಬೇಕು. ಅಲ್ಲದೆ ಒಮ್ಮೆ ಒಂದು ಬಣ್ಣವನ್ನು ಬಳಸಿದರೆ ಮತ್ತೆ ಅದನ್ನು ಬದಲಾಯಿಸಲಿಕ್ಕಾಗದು. ಹಾಗಾಗಿ ಎಲ್ಲವೂ ಪೂರ್ವ ನಿರ್ಧಾರಿತವಾಗಿಯೇ ಇರಬೇಕು ಮತ್ತು ಕಲಾವಿದ ಎಲ್ಲ ಹಂತದಲ್ಲೂ ತುಂಬಾ ಜಾಗರೂಕನಾಗಿರಬೇಕು. ಇದು ನಿಜವಾಗಿಯೂ ಒಂದು ತಪಸ್ಸಿನಂತೆ. ಇಂತಹ ಜಲವರ್ಣದ ವಾಷ್ ತಂತ್ರದಲ್ಲಿ ಶಿವಣ್ಣ ಜಿ.ಕೆ. ಸಿದ್ಧಹಸ್ತರು.

ಒಂದು ಕಾಲದಲ್ಲಿ ಚಿತ್ರಕಲೆಗೆ ಅಪರಿಮಿತ ಅವಕಾಶ ಕೊಟ್ಟ ಪತ್ರಿಕೆಗಳೆಂದರೆ 'ಪ್ರಜಾವಾಣಿ' ಬಳಗದ 'ಸುಧಾ' ವಾರಪತ್ರಿಕೆ ಮತ್ತು 'ಮಯೂರ' ಮಾಸಿಕ. ಇಂದು ಜಲವರ್ಣ ಚಿತ್ರಗಳ ಪ್ರಕಟನೆ ಪತ್ರಿಕೆಗಳಲ್ಲಿ ನಿಂತೇ ಹೋದಂತೆ ಕಾಣುತ್ತಿದೆ. ಒಂದು ಕಾಲಕ್ಕೆ ಮೂರು ನಾಲ್ಕು ಧಾರಾವಾಹಿಗಳು ಪ್ರಕಟವಾಗುತ್ತಿದ್ದ 'ಸುಧಾ'ದಲ್ಲಿ ಇಂದು ಒಂದೇ ಧಾರಾವಾಹಿ ಪ್ರಕಟವಾಗುತ್ತಿದೆ. ಓದುಗರ ನಿರಾಸಕ್ತಿ ಇದಕ್ಕೆ ಕಾರಣ ಎಂದು ಹೇಳಲಾಗುತ್ತದೆ. ರೋಚಕ ಕತೆಯುಳ್ಳ ಒಂದು ಧಾರಾವಾಹಿಯನ್ನು ಪ್ರಕಟಿಸುವುದೇ ಕಷ್ಟವಾಗಿರುವ ದಿನಗಳಲ್ಲಿ ಮಹಾಕಾವ್ಯವನ್ನು ಧಾರಾವಾಹಿಯಾಗಿ ಪ್ರಕಟಿಸಲು ಅಂದಿನ ದಿನದಲ್ಲಿ ಸಂಪಾದಕ ಕೆ.ಎನ್.ತಿಲಕಕುಮಾರ್ ಒಪ್ಪಿ ಅನುಮತಿ ನೀಡಿದರು. ಕೃಷ್ಣಪ್ಪನವರು ಅನುವಾದಿಸಿ ತಂದಿದ್ದ ಲಕ್ಷ್ಮೀಶನ ಜೈಮಿನಿ ಭಾರತವನ್ನು 2012ರಲ್ಲಿ ಧಾರಾವಾಹಿಯಾಗಿ ಪ್ರಕಟಿಸಿದೆವು. ಆ ಧಾರಾವಾಹಿಗೆ ಮನೋಹರ ಆಚಾರ್ಯ ಅವರು ಸೊಗಸಾಗಿ ಚಿತ್ರಗಳನ್ನು ರಚಿಸಿದ್ದರು. ಓದುಗರ ಪ್ರತಿಕ್ರಿಯೆ ಆಶಾದಾಯಕವಾಗಿತ್ತು. ಮೆಚ್ಚುಗೆ ರೂಪದಲ್ಲಿ ನೂರಾರು ಪತ್ರಗಳು ಬಂದವು.

ಈ ಧಾರಾವಾಹಿಗೆ ಸಿಕ್ಕ ಮೆಚ್ಚುಗೆ ಸಂಪಾದಕರಿಗೂ ಇಷ್ಟವಾಯಿತು. ಹಾಗಾಗಿ ನಂತರದಲ್ಲಿ ಶಿವಣ್ಣ ಅವರ ಚಿತ್ರ ರಚನೆಯೊಂದಿಗೆ ಈ ಎರಡು ಕೃಷ್ಣಪ್ಪನವರ ಮರು ಸೃಷ್ಟಿಗಳು 'ಸುಧಾ'ದಲ್ಲಿ ಪ್ರಕಟವಾಗಿ, ಓದುಗರ ಮನಸೂರೆಗೊಂಡವು. ಸುದ್ದಿ ಸಂಪಾದಕನಾಗಿದ್ದ ನಾನು ಆಗ 'ಸುಧಾ' ಪತ್ರಿಕೆಯಲ್ಲಿ ಕತೆ, ಧಾರಾವಾಹಿ, ಟಿವಿ, ಎಳೆಯರ ಅಂಗಳ ಮುಂತಾದ ವಿಭಾಗಗಳನ್ನು ನೋಡಿಕೊಳ್ಳುತ್ತಿದ್ದೆ. ಧಾರಾವಾಹಿಯಾಗಿ ಮಹಾಕಾವ್ಯಗಳ ಪ್ರಕಟನೆಗೆ ಅನುಮತಿ ನೀಡಿದ ಸುಧಾ ಸಹಾಯಕ ಸಂಪಾದಕ ಜಿ.ಎಂ.ಹನೀಫ್, ಪ್ರಜಾವಾಣಿ ಬಳಗದ ಸಹ ಸಂಪಾದಕ ಪದ್ಮರಾಜ ದಂಡಾವತಿ, ಪ್ರಜಾವಾಣಿ ಸಂಪಾದಕ ಕೆ.ಎನ್.ಶಾಂತಕುಮಾರ್ ಹಾಗೂ ಸುಧಾ ಸಂಪಾದಕರಾದ ಕೆ.ಎನ್.ತಿಲಕಕುಮಾರ್ ಅವರಿಗೆ ನಮ್ಮ ಅನಂತ ವಂದನೆಗಳು. ಈಗ ಸಿಕ್ಕಿರುವ ಪ್ರತಿಕ್ರಿಯೆ ಆಧರಿಸಿ ಮುಂದಿನ ದಿನಗಳಲ್ಲಿ ಸುಧಾ ಪತ್ರಿಕೆ ಮತ್ತಷ್ಟು ಮಹಾಕಾವ್ಯಗಳನ್ನು ಧಾರಾವಾಹಿಯಾಗಿ ಪ್ರಕಟಿಸಲಿ.

ಅಕ್ಷರಗಳೇ ನಿನ್ನ ಹಂಗೇ ಬೇಡ ಎಂಬಂತೆ ಶಿವಣ್ಣನವರ ಚಿತ್ರಗಳು ಇಲ್ಲಿ ಸಾಗಿದ್ದರೆ, ಇರಲಿ, ನಾನೇನು ನಿನ್ನನ್ನು ಹಂಗಿನಲ್ಲಿ ಕೆಡವಲಾರೆ ಎಂದು ಕೃಷ್ಣಪ್ಪನವರ ನಾಲ್ಕಕ್ಷರಗಳು ಚಿನ್ನಕ್ಕೆ ಪುಟವಿಟ್ಟಿವೆ. ಅಕ್ಷರ, ಚಿತ್ರ, ಹಾಡು ಎಲ್ಲವೂ ಒಟ್ಟಿಗೆ ಸಾಗಿದರೆ ಎಷ್ಟು ಚೆನ್ನ ಅಲ್ಲವೇ? ಅಂತೆಯೇ ಜಿ.ಕೆ.ಶಿವಣ್ಣ, ಜಿ.ಕೃಷ್ಣಪ್ಪ, ರುದ್ರೇಶ್ ಜಿ.ಅದರಂಗಿ, ಕೆ.ವಿ.ಕಾಳಿದಾಸ್ ಹಾಗೂ ನಾನು ಸೇರಿ, (ವಿ ಫೈವ್) ಐದು ಜನ ಈ ಸಾಹಸಕ್ಕೆ ಕೈ ಹಾಕಿದ್ದೇವೆ. ಹಿರಿಯ ಕಲಾ ವಿಮರ್ಶಕರಾದ ಕೆ.ವಿ.ಸುಬ್ರಮಣ್ಯಂ ಬೆನ್ನುಡಿ ಬರೆದು ಹರಸಿದ್ದಾರೆ. ಚಿತ್ರಾಸಕ್ತರು ಇದನ್ನು ಮೆಚ್ಚಿಕೊಳ್ಳುತ್ತಾರೆ ಎಂಬ ನಂಬುಗೆ ನಮ್ಮದು. ಅಕ್ಷರದ ಆಶ್ರಯದಾತರೂ ಇನ್ನೂ ಹೆಚ್ಚು ಮೆಚ್ಚಿಕೊಳ್ಳುತ್ತಾರೆ ಎಂಬ ಭರವಸೆಯೂ ನಮ್ಮದು. ಅಂತೆಯೇ ಈ ಕಲಾಪುಷ್ಪವನ್ನು ನಿಮ್ಮ ಕೈಯಲ್ಲಿಡುತ್ತಿದ್ದೇವೆ.

ಕಲಾಪೋಷಕರು :



ರುದ್ರೇಶ್ ಜಿ.ಅದರಂಗಿ,
ಸಾಹಿತಿ/ಅಂಕಣಕಾರರು, ಬೆಂಗಳೂರು



ಕೆ.ವಿ. ಕಾಳಿದಾಸ್,
ಸಾಹಿತಿ/ಕಲಾವಿದರು, ಕೋಲಾರ



ಹರಿಹರ ಮಹಾಕವಿಯ

ಗಿರಿಜಾ ಕಲ್ಯಾಣ

ಸರಳಗನ್ನಡದಲ್ಲಿ: ಡಾ.ಜಿ.ಕೃಷ್ಣಪ್ಪ

ಚಿತ್ರಗಳು: ಜಿ.ಕೆ.ಶಿವಣ್ಣ

ದಿನಾಂಕ:06-12-2012 ರಿಂದ 24-01-2013ರವರೆಗೆ
8 ವಾರಗಳ ಕಾಲ 'ಸುಧಾ' ವಾರ ಪತ್ರಿಕೆಯಲ್ಲಿ ಪ್ರಕಟವಾದ
ಹರಿಹರ ಮಹಾಕವಿಯ 'ಗಿರಿಜಾ ಕಲ್ಯಾಣ'
ಮಹಾಕಾವ್ಯಕ್ಕೆ ಬರೆದ ಚಿತ್ರಗಳು



ಗಿರಿಜಾ ಕಲ್ಯಾಣ

ಗಿರಿರಾಜನು ಶಿವಮಯ ತಾಣವಾದ ಹಿಮಾಲಯ ಪರ್ವತದ ರಾಜ, ಆತನ ನಗರ ಓಷಧಿ ಪ್ರಸ್ತಪುರ , ಇಳೆಯಲ್ಲೇ ಅತ್ಯಂತ ಸುಂದರವಾದ ಅದು, ಸಂಪತ್ತಿನಗಣಿಯಾಗಿತ್ತು. ಗಿರಿರಾಜನ ಪತ್ನಿ ಮೇನಾದೇವಿ. ಅವರಿಗೆ ಮೈನಾಕ ಎಂಬ ಪುತ್ರನಿದ್ದರೂ, ಪುತ್ರಿಯೊಬ್ಬಳನ್ನು ಮೇನಾದೇವಿ ಬಯಸಿದಳು. ಅದೂ ಅಂತಿಂಥವಳಲ್ಲ. ಶಿವನನ್ನೇ ಮೋಹಿಸುವಂತಹ ಮಗಳು ತನಗೆ ಬೇಕು ಎಂದಳು ಮೇನಾದೇವಿ. ಹಾಗಾದರೆ ತಪಸ್ಸು ಮಾಡಿ ದೇವರಿಂದಲೇ ಮಗಳನ್ನು ಪಡೆ ಎಂದು ಗಿರಿರಾಜನು ಮೇನಾದೇವಿಯನ್ನು ತಪಸ್ಸಿಗೆ ಕಳಿಸಿಕೊಟ್ಟನು.



ಗಿರಿಜಾ ಕಲ್ಯಾಣ

ಗಿರಿರಾಜನ ಪತ್ನಿ ಮೇನಾದೇವಿ ಪಾರ್ವತಿಯನ್ನೇ ತನ್ನ ಮಗಳಾಗಿ ಪಡೆಯಲು ಕಠಿಣ ತಪಸ್ಸು ಮಾಡಿದಳು. ಶಿವ-ಪಾರ್ವತಿಗೆ ಅದು ಮೆಚ್ಚುಗೆಯಾಯಿತು. ಪಾರ್ವತಿ ಪ್ರತ್ಯಕ್ಷಳಾಗಿ ನಿನ್ನ ಬಸಿರಲ್ಲಿ ನಾನು ಬರುತ್ತೇನೆ ಎಂದು ವರ ನೀಡಿದಳು. ಮೇನಾದೇವಿಯ ಮಗಳು ಗಿರಿಜೆಯಾಗಿ ಪಾರ್ವತಿ ಜನಿಸಿದಳು. ಗಿರಿಜೆಯ ಬಾಲಲೀಲೆ ಶಿವಲೀಲೆಯಾಯಿತು. ಗಿರಿಜಾಗೆ ಸದಾ ಶಿವನ ಧ್ಯಾನ, ಆಟ ಪಾಠಗಳೆಲ್ಲ ಅವನೊಂದಿಗೆ. ಅವಳಿಗೆ ಹಸಿವು, ನೀರಡಿಕೆ ಎಂಬುದೇ ಇರಲಿಲ್ಲ. ನೋಡು ನೋಡುತ್ತ ಗಿರಿಜೆಗೆ ಹತ್ತು ವರ್ಷವಾಯಿತು.



ಗಿರಿಜಾ ಕಲ್ಯಾಣ

ಸಖಿಯರ ಜೊತೆ ಜಲಕ್ರೀಡೆಯಾಡುವ ವಯಸ್ಸು ಗಿರಿಜೆಗೆ. ನಗೆಯ ಹೂವಾದ ಗಿರಿಜೆಯೊಡನೆ ವಿಲಾಸಿನಿಯರು ಜಲಕ್ರೀಡೆಯಾಡಿದರು. ದಿನೇ ದಿನೇ ಅವಳ ರೂಪು ಯೌವನ ವರ್ಧಿಸಿತು. ಗಿರಿಜೆ ಸಾಕ್ಷಾತ್ ಪಾರ್ವತಿ ಎಂದು ನಾರದರು ತಿಳಿಸಿದಾಗ ಗಿರಿರಾಜ ಮತ್ತು ಮೇನಾದೇವಿಯು ತಮ್ಮ ಜನ್ಮ ಸಾರ್ಥಕವಾಯಿತು ಎಂದುಕೊಂಡರು. ಈಕೆಗೆ ಪರಮೇಶ್ವರನೇ ವರ, ಸಂತಸದಿಂದ ಇವಳನ್ನು ಶಿವನಲ್ಲಿಗೆ ಕಳುಹಿಸುವುದು ಉಚಿತ ಎಂಬ ನಾರದನ ಹಿತೋಪದೇಶಕ್ಕೆ ಗಿರಿರಾಜ ಒಪ್ಪಿದನು.



ಗಿರಿಜಾ ಕಲ್ಯಾಣ

ಗಿರಿರಾಜನು ವಿಮಾನದಲ್ಲಿ ಮಗಳು ಗಿರಿಜೆಯನ್ನು ಸುತ್ತಿಸುತ್ತ ಹಲವು ದೇಶಗಳ ವೈಭವವನ್ನು ಪರಿಚಯಿಸುತ್ತಾನೆ. ಅವಳಿಗೆ ಪರಮ ಸುಧಾರಸಾರ್ದ್ರ್ರೆ ತುಂಗಭದ್ರಾ ನದಿಯನ್ನು ತೋರಿಸುತ್ತಾನೆ. ಪುಣ್ಯತೀರ್ಥ ಹೇಮಕೂಟದಲ್ಲಿ ತಪೋನಿರತನಾಗಿದ್ದ ಪರಶಿವನ ದರ್ಶನಕ್ಕೆ ಮಗಳನ್ನು ಕರೆತರುತ್ತಾನೆ. ಹೇಮಕೂಟದಲ್ಲಿ ಸಮಾಧಿ ಮಗ್ನ ಶಿವನ ಬಳಿ ಗಿರಿಜೆಯನ್ನು ಬಿಟ್ಟು ವಾಪಸಾಗುತ್ತಾನೆ. ಗಿರಿಜಾ ಅನಂದಾಶ್ರುಗಳಿಂದ ಶಿವನ ಪಾದ ತೊಳೆದು ಅವನ ಪ್ರೀತಿಗೆ ಪಾತ್ರಳಾಗುತ್ತಾಳೆ.



ಇತ್ತ ತಾರಕಾಸುರನೆಂಬ ರಾಕ್ಷಸನು ದೇವತೆಗಳ ಪಾಲಿಗೆ ಕಂಟಕನಾಗಿದ್ದನು. ಅವನು ಆತ್ಮಬಲವೆಂಬ ಕಣ್ಣುಗಳ ಮಧ್ಯದಲ್ಲಿ ಶ್ರೀತಾರಕೆಯನ್ನು ಹೊಂದಿದ್ದು, ಶತ್ರು ರಾಜರೆಂಬ ಕಗ್ಗತ್ತಲನ್ನು ಭೇದಿಸುವ ಕಿರಣಗಳುಳ್ಳವನಾಗಿದ್ದನು. ದೇವಗುರು ಬೃಹಸ್ಪತಿಯ ಸಾಮ, ದಾನ, ಭೇದ, ದಂಡಗಳೆಂಬ ಚತುರೋಪಾಯಗಳಿಗೆ ಜಗ್ಗದ ಅವನು, ದೇವತೆಗಳ ಮೇಲೆ ಯುದ್ಧ ಸಾರುವನು.

ತಾರಕಾಸುರನ ಚತುರಂಗ ಬಲವು ಹೆಬ್ಬುಲಿಯ ಹಿಂಡಿನಂತೆ, ನಂಜಿನ ಪುಂಜದಂತೆ ಸುರಸೈನ್ಯದ ಮೇಲೆ ಆಕ್ರಮಣ ನಡೆಸಿತು. ಸುರರ ಸೈನ್ಯ ಸೋತು ಯುದ್ಧ ವಿಮುಖವಾಯಿತು.



ಗಿರಿಜಾ ಕಲ್ಯಾಣ



ಭಯ ಭೀತರಾದ ದೇವತೆಗಳಿಗೆ ವಿಷ್ಣುವು, ಈಶ್ವರನಿಗೆ ಷಣ್ಮುಖನು ಹುಟ್ಟಿದ ಏಳನೆಯ ದಿನಕ್ಕೆ ತಾರಕನನ್ನು ಸಂಹಾರ ಮಾಡುವನೆಂದು ಬ್ರಹ್ಮನ ವರವಿದೆ. ಇದನ್ನು ತಿಳಿದು ಶಿವನ ತಪವನ್ನು ಭಂಗಪಡಿಸುವ ವೀರನ ಬಗ್ಗೆ ಆಲೋಚಿಸಿ; ಎಂದು ಹೇಳುವನು. ಅದಕ್ಕೆ ಮನ್ಮಥನೇ ಸಮರ್ಥನೆಂದು ಅವನ ಮನ ಒಲಿಸುತ್ತಾರೆ.

ತಪೋಭಂಗಕ್ಕೆ ತನ್ನ ಚತುರಂಗ ಬಲದೊಂದಿಗೆ ಆಗಮಿಸಿದ ಕಾಮ, ಶಿವನ ಹಣೆಗಣ್ಣಿನ ಉರಿಗೆ ಭಸ್ಮವಾಗುತ್ತಾನೆ. ಕಾಮನೇ ಇಲ್ಲವಾದ ಮೇಲೆ ತನ್ನ ಲಾವಣ್ಯ ಲಯವಾಯಿತು ಎಂದು ರತಿ ಹಲಬುತ್ತಾಳೆ, ಅವರ ನೆರವಿಗೆ ಗಿರಿಜೆ ಧಾವಿಸುತ್ತಾಳೆ.

ಗಿರಿಜಾ ಕಲ್ಯಾಣ

ಶಿವ ಗಿರಿಜೆಯನ್ನು ಗಮನಿಸಿದೆ ರಜತಗಿರಿಗೆ ಹೊರಟು ಹೋಗುತ್ತಾನೆ. ಅದರಿಂದ ಧೃತಿಗೆಡದ ಗಿರಿಜೆ ತಾನಿರುವಲ್ಲಿಗೇ ಶಿವ ಬರುವಂತೆ ಮಾಡುತ್ತೇನೆ ಎಂದು ಉಗ್ರ ತಪಸ್ಸು ಆರಂಭಿಸುತ್ತಾಳೆ. ಸಮುದ್ರವೇ ಒಣಗಿ ಹೋದಂತೆ, ಬೇಸಿಗೆ ಮುಗಿಲು ಹರಿದಂತೆ, ಸುರಿದ ಮಳೆಗೆ ಜಗ್ಗದ ಗಿರಿಜೆ ತನ್ನ ಉಗ್ರ ತಪಸ್ಸಿನಿಂದ ಶಿವನನ್ನು ಒಲೈಸಿಕೊಂಡಳು. ವಟು ವೇಷದಲ್ಲಿ ಬಂದ ಅವನು ಗಿರಿಜೆಗೆ 'ಸ್ಮಶಾನವಾಸಿಯಲ್ಲಿ ಅದು ಹೇಗೆ ನಿನ್ನ ಚಿತ್ತವಿಟ್ಟೆ?' ಎಂದು ಪ್ರಶ್ನಿಸುವನು. ಅವನ ನಿಂದೆಗೆ ಕೋಪಗೊಂಡ ಅವಳು ವಿಭೂತಿಯಿಂದ ವಟು ವೇಷಧಾರಿಯನ್ನು ಹೊಡೆಯಲು, ವಟುವೇಷ ಕಳಚಿಹೋಯಿತು. ಶಿವ ಬೆಳಗುತ್ತ ಗಿರಿಜೆಗೆ 'ರಜತಾದ್ರಿಗೆ ಹೋಗೋಣ ನಡೆ' ಎಂದ. ನನ್ನ ತಂದೆಯನ್ನು ಕೇಳಿ ರೂಢಿಯಂತೆ ವಿವಾಹವಾಗು ಎಂದಳು ಗಿರಿಜೆ. ರತಿಯ ಪತಿ ಕಾಮನನ್ನು ಮರಳಿ ಬದುಕಿಸು ಎಂದು ಗಿರಿಜೆ ಶಿವನನ್ನು ಬೇಡಿಕೊಂಡಳು. ರತಿ ನೆನದಾಗ ಶರೀರವಿಲ್ಲದ ಮನ್ಮಥ ಪ್ರತ್ಯಕ್ಷನಾಗುತ್ತಾನೆ ಎಂದು ಶಿವ ಕರುಣಿಸಿದ.



ಗಿರಿಜಾ ಕಲ್ಯಾಣ

ಶಿವನಿಗೆ ಕನ್ಯೆಯಾಚಿಸಲು ಸಪ್ತರ್ಷಿಗಳು ಗಿರಿರಾಜನ ಬಳಿ ಬಂದರು. ಸಂತೋಷದಿಂದ ಮಗಳನ್ನು ಕೊಡಲು ಒಪ್ಪಿದ ಗಿರಿರಾಜ ವಿವಾಹ ಮಹೋತ್ಸವದ ಸಿದ್ಧತೆ ನಡೆಸಿದನು. ಪರಮೇಶ್ವರನು ಮದುವಣಿಗನಾದನು. ಹರಿ, ಬ್ರಹ್ಮ ಇಂದ್ರಾದಿ ದೇವತಾ ಸಮೂಹ ನೆರೆದಿರಲು ಅವನು ಗಿರಿಜೆಯನ್ನು ಪಾಣಿಗ್ರಹಣ ಮಾಡಿದನು. ವಧೂವರರು ಸಪ್ತಪದಿ ತುಳಿದರು. ಪರಶಿವನು ಗಿರಿರಾಜ ಮೇನೆಯರನ್ನು ಮನ್ನಿಸಿದನು. ಗಿರಿಜಾ ಮನೋಹರನೂ ಆನಂದ ಸಾಗರ ಸುಧಾಕಿರಣನೂ ಆದ ಪರಮೇಶ್ವರನು ಗಿರಿಜೆಯೊಡನೆ ಕೈಲಾಸದಲ್ಲಿ ಸುಖದಿಂದಿದ್ದನು.




ತ್ರಿಲೋಕ ಕಂಟಕನಾಗಿದ್ದ ತಾರಕಾಸುರನ ಸಂಹಾರದ ಕಾಲ ಸಮೀಪಿಸಿತು. ಪಂಚಮುಖ, ದಶಭುಜಗಳೊಡನೆ ಶೋಭಿಸುವ ಪರಮೇಶ್ವರನಿಗೆ ಷಣ್ಮುಖ (ಸ್ಕಂದ) ಉದಯಿಸಿದನು. ಸ್ಕಂದನು ಹುಟ್ಟಿದ ಏಳು ದಿನಗಳಲ್ಲಿಯೇ ತಾರಕಾಸುರನನ್ನು ಕೊಂದು ಹಾಕಿದನು.

ರಾಘವಾಂಕ ಮಹಾಕವಿಯ
ಹರಿಶ್ಚಂದ್ರ ಚಾರಿತ್ರ

ಸರಳಗದ್ಯದಲ್ಲಿ : ಡಾ.ಜಿ.ಕೃಷ್ಣಪ್ಪ

ಚಿತ್ರಗಳು: ಜಿ.ಕೆ.ಶಿವಣ್ಣ



23-10-2014ರಿಂದ 18-12-2014ರವರೆಗೆ 9 ವಾರಗಳ ಕಾಲ "ಸುಧಾ" ವಾರ ಪತ್ರಿಕೆಯಲ್ಲಿ ಪ್ರಕಟವಾದ ರಾಘವಾಂಕ ಮಹಾಕವಿಯ ಹರಿಶ್ಚಂದ್ರ ಚಾರಿತ್ರ ಮಹಾ ಕಾವ್ಯಕ್ಕೆ ಬರೆದ ಚಿತ್ರಗಳು



" ಹರನೆಂಬುದೇ ಸತ್ಯ,
ಸತ್ಯವೆಂಬುದು ಹರನು, ಎರಡಿಲ್ಲ"
- ರಾಘವಾಂಕ

ಹರಿಶ್ಚಂದ್ರ ಚಾರಿತ್ರ



ಮುನಿವರ್ಯರನ್ನೊಳಗೊಂಡ ರಾಜಸಭೆಯಲ್ಲಿ ಇಂದ್ರನು 'ಧರೆಯಲ್ಲಿ ಅತ್ಯಂತ ಸತ್ಯವಂತರು ಯಾರು' ? ಎಂಬ ಪ್ರಶ್ನೆ ಕೇಳುತ್ತಾನೆ. ವಸಿಷ್ಠ ಮುನಿಯು 'ಈ ಭೂಮಿಯಲ್ಲಿ ಸತ್ಯನಿಷ್ಠೆಯಿಂದ ಇರುವವನು ಎಂದರೆ ಅದು ಹರಿಶ್ಚಂದ್ರ ಮಹಾರಾಜ' ಎಂದು ಹೇಳುತ್ತಾನೆ. ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ವಿಶ್ವಾಮಿತ್ರ ಮುನಿ ವಸಿಷ್ಠರೊಂದಿಗೆ ವಾಗ್ವಾದ ಆರಂಭಿಸುತ್ತಾನೆ. " ಹರಿಶ್ಚಂದ್ರನು ಸುಳ್ಳು ಹೇಳದಿದ್ದರೆ ನನ್ನ ಪುಣ್ಯದಲ್ಲಿ ಅರ್ಧವನ್ನು ಹರಿಶ್ಚಂದ್ರನಿಗೆ ಧಾರೆಯೆರೆದು ಕೊಡುತ್ತೇನೆ. ಎಂದು ಶಪಥಮಾಡಿದ ವಿಶ್ವಾಮಿತ್ರ ಹರಿಶ್ಚಂದ್ರನ ಸತ್ವಪರೀಕ್ಷೆಗೆ ತೊಡಗುತ್ತಾನೆ. ಹರಿಶ್ಚಂದ್ರನು ಸುಳ್ಳು ಆಡುವಂತೆ ಮಾಡುವ ಬಗ್ಗೆ ಒಂದು ರಹಸ್ಯ ಯೋಜನೆಯನ್ನು ರೂಪಿಸುತ್ತಾನೆ. ತನ್ನ ಮುನಿಗಳಿಗೆ ಹರಿಶ್ಚಂದ್ರನು ಸುವರ್ಣಯಾಗ ಮಾಡುವಂತೆ ಬೋಧಿಸಲು ಹೇಳುತ್ತಾನೆ. ಆ ಯಾಗದಲ್ಲಿ "ಆನೆಯ ಮೇಲೆ ನಿಂತು ಒಂದು ಕವಡೆಯನ್ನು ಮಿಡಿದರೆ ಅದು ಎಷ್ಟು ಎತ್ತರಕ್ಕೆ ಹೋಗುವುದೋ ಅಷ್ಟೆತ್ತರದ ಸುವರ್ಣರಾಶಿ ಕೊಡು ! ಎಂದು ರಾಜನನ್ನು ಕೇಳುತ್ತಾನೆ. ರಾಜ ಅದನ್ನು ನೀಡಿ ತೆಗೆದುಕೊಂಡು ಹೋಗಿ ಎನ್ನಲು 'ಈಗ ಬೇಡ ನಿನ್ನ ಮೇಲಿರಲಿ, ಬೇಕಾದಾಗ ತರಿಸಿಕೊಳ್ಳುತ್ತೇನೆ' ಎಂದು ಹೇಳಿ ಆಶ್ರಮಕ್ಕೆ ತೆರಳುತ್ತಾನೆ.

ಹರಿಶ್ಚಂದ್ರ ಚಾರಿತ್ರ



ಅಯೋಧ್ಯೆಯ ವನಪಾಲಕನು, ಮನೋಹರವಾದ ವಸಂತ ಋತು ಸಮಯದಲ್ಲಿ ನಂದನವನದಲ್ಲಿರಲು ರಾಜಾ ಹರಿಶ್ಚಂದ್ರನನ್ನು ಆಹ್ವಾನಿಸುವನು. ರಾಜನು ತನ್ನ ಪಟ್ಟದರಸಿ ಚಂದ್ರಮತಿ, ಮಗ ಲೋಹಿತಾಶ್ವರನ್ನು ಕರೆದು ಕೊಂಡು ಮಂತ್ರಿ ಮತ್ತು ಸಕಲ ಪರಿವಾರ ಸಹಿತ ನಂದನವನಕ್ಕೆ ಹೋಗುವನು. ಇತ್ತ ಹರಿಶ್ಚಂದ್ರನ ಕೀರ್ತಿಗೆ ಕಳಂಕ ತರುವುದು ಹೇಗೆ ಎಂದು ವಿಶ್ವಾಮಿತ್ರ ರಾತ್ರಿ ಹಗಲು ಯೋಚಿಸಿ ಸಂಚು ಹೂಡುತ್ತಾನೆ. ಅವನ ಕುಶಲಬುದ್ಧಿಗೆ ಹೊಳೆದದ್ದು ರಾಜ್ಯದ ಬೆಳೆಗಳನ್ನು ಮೃಗಗಳ ಮೂಲಕ ನಾಶಪಡಿಸುವುದು. ಅದರಂತೆ ಕಾರ್ಯಪ್ರವೃತ್ತನಾದಾಗ ರಾಜ್ಯದ ಜನರು ಬೇಸತ್ತು ಹರಿಶ್ಚಂದ್ರ ಮಹಾರಾಜನ ಮೊರೆಹೋಗುತ್ತಾರೆ. ಪ್ರಜೆಗಳಿಗೆ ಸಾಂತ್ವನ ಹೇಳಿ ಖಗಮೃಗಗಳನ್ನು ಸದೆ ಬಡಿಯಲು ರಾಜನು ಬೇಟೆಗೆ ಹೋಗುವನು.



ಕಾಡಿನಲ್ಲಿ ಖಗ ಮೃಗಗಳ ಬೇಟೆಯಲ್ಲಿ ತೊಡಗಿದ ಬೇಡರು ಒಬ್ಬರಿಗೊಬ್ಬರು ತಮ್ಮ ಅನುಭವಗಳನ್ನು ಹಂಚಿಕೊಂಡು ಬೇಟೆಯಾಡುತ್ತಿದ್ದರು. ಪ್ರಾಣಿಗಳ ರೋದನ ಕಂಡ ಹರಿಶ್ಚಂದ್ರ ಮಮ್ಮಲ ಮರುಗಿದನು. ಹರಿಶ್ಚಂದ್ರನಿಗೆ ಹೆಚ್ಚು ಕಾಟ ಕೊಡಲು ಕೌಶಿಕನು ಮಾಯಾ ವರಾಹವನ್ನು ಸೃಷ್ಟಿಸಿದನು. ಅದು ಬೇಡರ ಪಡೆಯನ್ನು ಸಂಹರಿಸಿ, ಕೈಗೆ ಸಿಗದ ಹಾಗೆ ನುಸುಳಿ ಮಾಯವಾಗುತ್ತಿತ್ತು. ಬೇಡನೊಬ್ಬನು ಬಂದು ಆ ಹಂದಿಗೆ ಹೆದರಿದ ಪರಿಯನ್ನು ವಿವರಿಸಿದನು. ರಾಜನು ಆ ಹಂದಿಯನ್ನು ತೋರಿಸುವಂತೆ ಹೇಳಿ ಅದರ ಬೇಟೆಗೆ ಹೋದನು. ಈ ಮಧ್ಯೆ ವಿಶ್ವಾಮಿತ್ರಾಶ್ರಮಕ್ಕೆ ಹೋಗದಿರುವಂತೆ ಹರಿಶ್ಚಂದ್ರನಿಗೆ ಪರಾಶರ ಮುನಿಗಳು ಸಲಹೆ ಕೊಡುತ್ತಾರೆ.



ಮಾಯಾ ವರಾಹವನ್ನು ಅಟ್ಟಿಸಿಕೊಂಡು ಹೋದಾಗ ಅದು ಹರಿಶ್ಚಂದ್ರನನ್ನು ವಿಶ್ವಾಮಿತ್ರನ ಆಶ್ರಮಕ್ಕೆ ಕರೆದು ಕೊಂಡುಹೋಯಿತು. ಹರಿಶ್ಚಂದ್ರನ ಆಗಮನ ವಿಶ್ವಾಮಿತ್ರನ ಕೋಪವನ್ನು ಕೆರಳಿಸಿತು. 'ರಾಜ ಇಂದು ಸಿಕ್ಕಿರುವನು, ಅವನನ್ನು ಗೋಳಾಡಿಸದೆ ಬಿಡುವುದಿಲ್ಲ' ಎಂದು ಘರ್ಜಿಸುತ್ತಾ ಹೂಂಕರಿಸಲು ಇಬ್ಬರು ವನಿತೆಯರು ಸೃಷ್ಟಿಯಾದರು. ಆ ಮಾಯದ ತರುಣಿಯರು ರಾಜನ ಮುಂದೆ ಸುಶ್ರಾವ್ಯವಾಗಿ ಹಾಡಿ ತಮ್ಮನ್ನು ಮದುವೆಯಾಗು ಎನ್ನುತ್ತಾರೆ. ಅದನ್ನು ನಿರಾಕರಿಸಿದಾಗ ಆ ವನಿತೆಯರು ಬಿಡದೆ ಕಾಡಲಾರಂಭಿಸಿದರು. ರಾಜನು ಚಾವಟಿ ತೆಗೆದು ತರುಣಿಯರಿಗೆ ಹೊಡಯುತ್ತಾನೆ. ಕಂಬನಿ ಸುರಿಸತ್ತಾ ಇಬ್ಬರೂ ಕೌಶಿಕನ ಬಳಿಗೆ ಹೋಗುತ್ತಾರೆ.

ಹರಿಶ್ಚಂದ್ರ ಚಾರಿತ್ರ



ವಿಶ್ವಾಮಿತ್ರನು ಕಡೆಗಣ್ಣಿನಲ್ಲಿ ಕಿಡಿಕಾರುತ್ತ ಹರಿಶ್ಚಂದ್ರ ರಾಜನಿದ್ದಲ್ಲಿಗೆ ಬರುತ್ತಾನೆ. ರಾಜ ಅವನಿಗೆ ಅನರ್ಘ್ಯರತ್ನ ನೀಡಿ ಉದ್ದಂಡ ನಮಸ್ಕಾರ ಮಾಡುತ್ತಾನೆ. ಆಗ ಮುನಿಯು ರಾಜನನ್ನು ಒದೆದು ಸಿಡಿಲ ನುಡಿಯಿಂದ ಹಂಗಿಸುತ್ತಾನೆ. 'ನನ್ನ ಕುವರಿಯರನ್ನು ಮದುವೆಯಾಗು' ಎಂದು ಹಲವು ರೀತಿಯಲ್ಲಿ ಕಾಡುತ್ತಾನೆ. ಆಗ ರಾಜನು 'ಯಾವ ಕಾರಣಕ್ಕೂ ಚಂಡಾಲ ಸ್ತ್ರೀಯರನ್ನು ವರಿಸುವುದಿಲ್ಲ. ನೀವು ಕಾಡಿಬೇಡುವಿರಾದರೆ, ನನ್ನ ಸರ್ವ ರಾಜ್ಯವನ್ನಾದರೂ ನಿಮಗೆ ಕೊಡಲು ಒಪ್ಪುವೆನು' ಎಂದು ಹೇಳುವನು. 'ತಥಾಸ್ತು, ರಾಜ್ಯವನ್ನು ಸ್ವೀಕರಿಸಿದೆನು' ಎಂದು ಹೇಳಿದ ಕೌಶಿಕನು ಬಲಾತ್ಕಾರವಾಗಿ ರಾಜ್ಯವನ್ನು ಕಸಿದುಕೊಳ್ಳುತ್ತಾನೆ. ಹರಿಶ್ಚಂದ್ರನು ಮುನಿಗೆ ರಾಜ್ಯವನ್ನೂ ಸಕಲ ಸಂಪತ್ತನ್ನೂ ಧಾರೆಯೆರೆದು ಕೊಡುತ್ತಾನೆ. ವಿಶ್ವಾಮಿತ್ರನು ಹರಿಶ್ಚಂದ್ರನಿಗೆ ಬಹು ಸುವರ್ಣಯಾಗದ ಸಂದರ್ಭದಲ್ಲಿ ದಕ್ಷಿಣೆಯಾಗಿ ಕೊಡಬೇಕಾಗಿದ್ದ ಹೊನ್ನು ಬಾಕಿ ಇದೆ, ಅದನ್ನು ಕೊಡು ಎನ್ನುತ್ತಾನೆ. ರಾಜನು ಅದಕ್ಕೆ ಸ್ವಲ್ಪ ಕಾಲಾವಕಾಶ ಬೇಕು ಎಂದು 48 ದಿನಗಳ ಅವಧಿ ಕೇಳುತ್ತಾನೆ. ಅದನ್ನು ನೀಡಿದ ವಿಶ್ವಾಮಿತ್ರ ರಾಜಧಾನಿಗೆ ತನ್ನೊಂದಿಗೆ ಬರುವಂತೆ ರಾಜನಿಗೆ ಆಜ್ಞಾಪಿಸುತ್ತಾನೆ.

ಹರಿಶ್ಚಂದ್ರ ಚಾರಿತ್ರ

ಹರಿಶ್ಚಂದ್ರನು ರಾಜಧಾನಿ ಅಯೋಧ್ಯಾಪುರಕ್ಕೆ ಬಂದು ಮುನಿಗೆ ಎಲ್ಲವನ್ನೂ ಒಪ್ಪಿಸಿ ರಾಜ್ಯವನ್ನು ಬಿಟ್ಟು ಪತ್ನಿ-ಪುತ್ರರ ಸಮೇತ ಕಾಡಿನ ಹಾದಿ ಹಿಡಿಯುವನು. ಆಗ ಪುರದ ಪುಣ್ಯವು ಪುರುಷರೂಪಿಂದ ಹೋಗುತ್ತಿದೆ; ಆಶ್ರಿತ ಜನರ ರಕ್ಷಣೆಯ ಭಾಗ್ಯವು ಅಡವಿಗೆ ನಡೆಯುತ್ತಿದೆ;' ಎಂದು ಪುರಜನರ ಮನವು ಮಿಡುಮಿಡನೆ ಮಿಡುಕಿತು. ಅವರು ಅತೀವ ಸಂಕಟಪಟ್ಟು ನೋವಿನ ನಿಟ್ಟುಸಿರು ಬಿಟ್ಟರು. ಅದಕ್ಕೆ ಕಾರಣನಾದ ವಿಶ್ವಾಮಿತ್ರನಿಗೆ ಹಿಡಿಶಾಪ ಹಾಕಿದರು. ವಿಶ್ವಾಮಿತ್ರನು ತೆರಕಾರ ನಕ್ಷತ್ರಿಕನಿಗೆ 'ಹರಿಶ್ಚಂದ್ರನನ್ನು ಹೇಗಾದರೂ ಮಾಡಿ ಹುಸಿಕನೆನಿಸು' ಎಂದು ಕಿವಿಮಾತು ಹೇಳಿ ಕಳಿಸುವನು. ಕಾಡಿನಲ್ಲಿ ಹರಿಶ್ಚಂದ್ರ ಕುಟುಂಬ ವಿಪರೀತ ಕಷ್ಟ ಅನುಭವಿಸುತ್ತದೆ. ದಾವಾನಲದಲ್ಲಿ ಚಂದ್ರಮತಿ, ಲೋಹಿತಾಶ್ವ ನಲುಗಿ ಹೋಗುತ್ತಾರೆ. ಪರಿಶುದ್ಧ ಚಂದ್ರಮತಿಯು ಶಿವನನ್ನು ಧ್ಯಾನಿಸುತ್ತ ದಳ್ಳುರಿಯನ್ನು ಪ್ರವೇಶಿಸಲು ಕೌಶಿಕನ ಕೃತಕಾಗ್ನಿಯು ಹರಿದೋಡುತ್ತದೆ.



ಹರಿಶ್ಚಂದ್ರ ಚಾರಿತ್ರ



ಹೊನ್ನ ರಾಶಿಯನ್ನು ಕೊಡಬೇಕಾದ ಅವಧಿ ಮೀರುತ್ತದೆ. ಹರಿಶ್ಚಂದ್ರನಿಗೆ ಒತ್ತಡ ಹೆಚ್ಚಾಗುತ್ತಿದೆ. ಪೊಡವಿಪತಿಯಾದ ಅವನು ಸತಿಸುತರ ತಲೆಗಳಲ್ಲಿ ಹುಲ್ಲನ್ನು ಕಟ್ಟಿ ಅವರನ್ನು ವಿಪ್ರನೊಬ್ಬನಿಗೆ ಮಾರಾಟ ಮಾಡುತ್ತಾನೆ. ಅದು ನಕ್ಷತ್ರಿಕನ ವೆಚ್ಚಕ್ಕೆ ಸರಿಹೋಗುತ್ತದೆ. ಆಗ ಏನೂ ಮಾಡಲು ತೋಚದ ಹರಿಶ್ಚಂದ್ರನು ತನ್ನನ್ನೇ ಮಾರಿಕೊಳ್ಳುತ್ತಾನೆ.

ವೀರ ಬಾಹುಕನೆಂಬ ಚಂಡಾಲ ಹರಿಶ್ಚಂದ್ರನಿಗೆ ಹೊನ್ನು ಕೊಟ್ಟು ತನ್ನ ಸೇವಕನನ್ನಾಗಿ ಕೊಡಿಕೊಳ್ಳುತ್ತಾನೆ. ಸುಡುಗಾಡುಕಾಯಲು ನೇಮಿಸುತ್ತಾನೆ. ಹರಿಶ್ಚಂದ್ರನು ಬೇಯುವ ಹೆಣದ ಹಿಂಡುಗಳ ಕೆಟ್ಟ ನಾತದ ಸ್ಮಶಾನವನ್ನು ಹೊಕ್ಕು, ಕೊಟ್ಟ ಕೆಲಸವನ್ನು ನಿಷ್ಠೆಯಿಂದ ಮಾಡುತ್ತಾನೆ.

ಹರಿಶ್ಚಂದ್ರ ಚಾರಿತ್ರ

ಚಂದ್ರಮತಿ ಲೋಹಿತಾಶ್ವರಿಗೆ ಮನೆಯ ಮಾಲಕರು ತುಂಬ ಹಿಂಸೆ ಕೊಡುತ್ತಾರೆ. ಲೋಹಿತಾಶ್ವ ಹುಲ್ಲು ತರಲು ಕಾಡಿಗೆ ಹೋಗುತ್ತಾನೆ. ಹುತ್ತದ ಮೇಲೆ ಸೊಂಪಾಗಿ ಬೆಳೆದ ಹುಲ್ಲು ಕೀಳಲು ಹೋಗಿ ಸರ್ಪ ಕಡಿದು ಸಾಯುತ್ತಾನೆ. ಅವನ ಜೊತೆಗೆ ಕಾಡಿಗೆ ಹೋಗಿದ್ದ ಹುಡುಗರು ಬಂದು ಚಂದ್ರಮತಿಗೆ ಸುದ್ದಿ ಮುಟ್ಟಿಸುತ್ತಾರೆ. ಮಗನ ಸಾವು ಬರಸಿಡಿಲಿನಂತೆ ಎರಗಿ ಅವಳು ಮಮ್ಮಲ ಮರುಗುತ್ತಾಳೆ. ರಾತ್ರೋರಾತ್ರಿ ಕಾಡಿಗೆ ಹೋಗಿ ಮಗನನ್ನು ಹುಡುಕಿ ನೋಡುತ್ತಾಳೆ. 'ಅಯ್ಯೋ ಮಗನೆ ಹೆತ್ತೊಡಲು ಹುಡಿಹುಡಿಯಾಗಿ ಹೋಯಿತು'. ಎಂದು ಗೋಳಿಡುತ್ತಾಳೆ. ಸುಡುಗಾಡಿಗೆ ಹೆಣವನ್ನು ಕೊಂಡು ಹೋಗಿ ಸುಡಲು ತಯಾರಿ ಮಾಡುವಾಗ ಮಸಣ ಕಾಯುವ ಹರಿಶ್ಚಂದ್ರ ಬರುತ್ತಾನೆ. ' ಮಸಣ ವಾಡಗೆಯನ್ನು ಕೊಡದೆ ಸುಡಬೇಡ' ಎಂದು ಹೇಳಿ ಮುಟ್ಟಿಗೆಯ ಮೇಲಿದ್ದ ಮಗನ ಹಿಂಗಾಲು ಹಿಡಿದು ಸೆಳೆದು ಬಿಡುತ್ತಾನೆ. ಆಗ ಆ ತಾಯಿ 'ಬಿಸುಡದಿರು, ಬಿಸುಡದಿರು, ಬೇಡ ಬೇಡ, ಆಕಟಕಟ; ಹಸುಳೆ ನೋಯುವನು' ಎಂದು ಹೇಳಿ ಮಗನನ್ನು ಅಪ್ಪಿಕೊಳ್ಳುತ್ತಾಳೆ. 'ತಾನು ಅಸಹಾಯಕ ನಿರ್ಗತಿಕ ಲೋಗರ ಮನೆಯ ಬಡದಾಸಿ, ತನ್ನಲ್ಲಿ ಕೊಡಲು ಏನೂ ಇಲ್ಲ' ಎಂದು ಹೇಳುತ್ತಾಳೆ.

'ನಿನ್ನ ಕೊರಳಲ್ಲಿರುವ ಕಡು ಚೆಲವಾದ ತಾಳಿಯನ್ನು ಅಡವಿಟ್ಟು ಬಳಿಕ ಬಿಡಿಸಿಕೊ' ಎಂದು ಹರಿಶ್ಚಂದ್ರ ನುಡಿದಾಗ ಆತನೇ ತನ್ನ ಪತಿ ಎಂದು ತಿಳಿಯುತ್ತಾಳೆ. ತನ್ನ ಸೌಭಾಗ್ಯ ನೆನೆದು ಗೋಳಿಡುತ್ತಾಳೆ.



ಹರಿಶ್ಚಂದ್ರ ಚಾರಿತ್ರ



ಚಂದ್ರಮತಿಯು ಮಸಣವಾಡಗೆಯನ್ನು ತರಲು ಸ್ಮಶಾನದಿಂದ ಕಾಶೀಪುರಕ್ಕೆ ನಡೆದು ಬರುವಾಗ ಕೌಶಿಕ ಮುನಿಯು ಭೂಪತಿಯ ಸತಿಯನ್ನು ಕಾಡಲು ಮಾಯೆಯಿಂದ ಕೆಲವು ಚೋರರನ್ನು ಸೃಷ್ಟಿಸುತ್ತಾನೆ. ಅವರು ಕಾಶೀಪುರದ ರಾಜನ ಮಗನನ್ನು ಅಪಹರಿಸಿ, ಆ ಮಗುವಿನ ಕೊರಳು ಕತ್ತರಿಸಿ ಚಂದ್ರಮತಿ ಬರುವ ದಾರಿಯಲ್ಲಿಡುವರು. ಚಂದ್ರಮತಿ ಆ ಮಗುವಿನ ಒರಲಾಟ ಕೇಳಿ, ತನ್ನ ಮಗನೇ ಎಂದು ಭ್ರಮೆಗೊಳಗಾಗುವಳು. ರಾಜಭಟರು ಬಂಧಿಸಿ ಕರೆದೊಯ್ಯಲು ರಾಜನು ಆಕೆಯನ್ನು ಅನಾಮಿಕನ ಕೈಯಲ್ಲಿ ಕೊಲ್ಲಿಸು ಎಂದು ವೀರ ಬಾಹುಕನಿಗೆ ಆಜ್ಞೆ ಮಾಡುವನು.

ಹರಿಶ್ಚಂದ್ರನು ಚಂದ್ರಮತಿಯನ್ನು ಪೂರ್ವಾಭಿ ಮುಖವಾಗಿ ಕುಳ್ಳರಿಸಿ ಕುತ್ತಿಗೆ ಕತ್ತರಿಸಲು ಸಿದ್ಧವಾಗುವನು. ಆಗ ವಿಶ್ವಾಮಿತ್ರ ಆಕಾಶದಿಂದ ‘ ಈಗಲೂ ನನ್ನ ಸುಪುತ್ರಿಯರನ್ನು ಮದುವೆಯಾದರೆ ನಿನ್ನ ರಾಜ್ಯ ಹಿಂದುರುಗಿಸಿ, ಬಂಧನ ಮೋಕ್ಷನನ್ನಾಗಿ ಮಾಡುವೆ’ ಎಂದು ಹೇಳುವನು. ಅದಕ್ಕೆ ಹರಿಶ್ಚಂದ್ರನು ‘ನಾನು ನನ್ನ ಪತ್ನಿಯನ್ನು ಕೊಂದರೂ ಅದು ತಪ್ಪಲ್ಲ; ಸತ್ಯವನ್ನು ಪಾಲಿಸಿದೆನು ಎನಿಸಿದರೆ ಸಾಕು’ ಎಂದು ಹೇಳಿ ಹೆಂಡತಿಯನ್ನು ಕತ್ತಿಯಿಂದ ಹೊಡೆಯುವನು. ಹೊಡೆದ ಖಡ್ಗದ ಬಾಯಿ ಕಡೆಯಿಂದ ಶಶಿಕಳೆಯ ಗಂಗಾಧರ ಮೂಡಿ ಬರುವನು; ಅಂಬರದಿಂದ ದೇವತೆಗಳು ಹೂಮಳೆ ಸುರಿಸುವರು.

ಶಿವನು ಕೌಶಿಕನನ್ನು ಕರೆದು ಸುಕುಮಾರನನ್ನು ಎಬ್ಬಿಸು ಎಂದು ಹೇಳಲು ಲೋಹಿತಾಶ್ವನು ನಿದ್ದೆ ತಿಳಿದೇಳುವಂತೆ ಎದ್ದನು. ಶಿವನ ಸಮಕ್ಷಮದಲ್ಲಿ ಕೌಶಿಕ ಮುನಿಯು ಹರಿಶ್ಚಂದ್ರನಿಗೆ ತನ್ನ ತಪಸ್ಸಿನ ಅರ್ಧ ಪಾಲನ್ನು ಧಾರೆಯೆರೆದು ಕೊಡುವನು. ವಸಿಷ್ಠನು ಹರಿಶ್ಚಂದ್ರನಿಗೆ ‘ ನೀನು ನಿನ್ನ ಭಾಷೆಯನ್ನು ನಡೆಸಿ ರಕ್ಷಿಸಿದೆ. ಸತ್ಯವನ್ನು ಮೆರೆದೆ’ ಎಂದು ಹೇಳಿ ಸಂತೋಷದಿಂದ ಅಪ್ಪಿಕೊಳ್ಳುವನು.

ಹರಿಶ್ಚಂದ್ರ ರಾಜನು ಪತ್ನಿ ಪುತ್ರ ಸಹಿತ ಮಂತ್ರಿ ಸತ್ಯಕೀರ್ತಿಯೊಡನೆ ರಥವೇರಿ ಅಯೋಧ್ಯಾಪುರದ ಕಡೆಗೆ ನಡೆದನು.



ಗಿರಿಜಾ ಕಲ್ಯಾಣದ ಬಗ್ಗೆ ಅಭಿಪ್ರಾಯಗಳು:

'ಗಿರಿಜಾಕಲ್ಯಾಣ' ಧಾರಾವಾಹಿಗೆ ಶಿವಣ್ಣನವರ ಚಿತ್ರಗಳನ್ನು ಜನಮೆಚ್ಚಿಕೊಂಡಿದ್ದು ನೋಡಿ ನನಗೆ ಸಂತಸವಾಗಿದೆ. ಈ ಕಾಲಕ್ಕೆ ಅಂತಹ ಅಗತ್ಯವಿತ್ತು. - ಕೆ. ವಿ. ಸುಬ್ರಮಣ್ಯಂ ಬೆಂಗಳೂರು

ಎಂಟು ಕಂತುಗಳಲ್ಲಿ ಪ್ರಕಟವಾದ 'ಗಿರಿಜಾಕಲ್ಯಾಣ' ಕಣ್ಣುಗಳನ್ನು ಮನವನ್ನು ತಣಿಸಿತು. ಓದುಗರನ್ನು ಬೇರೊಂದು ಲೋಕಕ್ಕೆ ಕರೆದೊಯ್ದು, ಕಲಾವಿದ ಜಿ.ಕೆ.ಶಿವಣ್ಣ ಅವರ ಚಿತ್ರಗಳಂತೂ ಮನಮೋಹಕ.
- ಡಾ.ಎಚ್. ಗಿರಿಜಮ್ಮ , ದಾವಣಗೆರೆ/ ವಸುಂಧರಾ ಸತ್ಯ, ಕೆ.ಎಸ್.ಸುರಭಿ, ದೊಡ್ಡಬಳ್ಳಾಪುರ/ರಾಜಶೇಖರ ಗೌಡ, ಕೊಟ್ಟೂರು.

ಹರಿಹರನ 'ಗಿರಿಜಾಕಲ್ಯಾಣ' ಮಹಾಕಾವ್ಯವನ್ನು ಜಿ.ಕೆ.ಶಿವಣ್ಣನವರ ಚಿತ್ರಗಳು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿವೆ. ಅಕ್ಷರಗಳಲ್ಲಿ ಅನನ್ಯವಾಗಿ ಕಟ್ಟಿಕೊಟ್ಟಿರುವ ಶೃಂಗಾರ ಕಾವ್ಯಕ್ಕೆ ದೃಶ್ಯದ ಆಯಾಮವನ್ನು ಅವರ ಚಿತ್ರಗಳು ಕಲ್ಪಿಸಿವೆ.
- ಡಾ.ಮೀರಾಸಾಬಿಹಳ್ಳಿ, ಶಿವಣ್ಣ ಚಳ್ಳಕೆರೆ, (10-01-2013)

ಬೇಂದ್ರೆ ಕೃಷ್ಣಪ್ಪನವರು ಲಕ್ಷ್ಮಿಶನ' ಜೈಮುನಿ ಭಾರತ'ವನ್ನು ಸರಳಗನ್ನಡದಲ್ಲಿ ನೀಡಿ ಕನ್ನಡಿಗರ ಗೌರವ, ಅದರಗಳಿಗೆ ಪಾತ್ರರಾಗಿದ್ದರು, ಇದೀಗ ಗಿರಿಜಾ ಕಲ್ಯಾಣ'ದ ಸರಳಗನ್ನಡ ಮೆಚ್ಚಿನ ಸುಧಾ ಪತ್ರಿಕೆಯಲ್ಲಿ ಧಾರಾವಾಹಿಯು ಉಪಶೀರ್ಷಿಕೆ ಹಾಗೂ ಶಬ್ದಾರ್ಥಗಳನ್ನು ಒಳಗೊಂಡಿರುವುದು ಹೆಚ್ಚು ಅರ್ಥಪೂರ್ಣವಾಗಿದೆ. ಜಿ.ಕೆ.ಶಿವಣ್ಣ ಅವರ ಚಿತ್ರಗಳು ಶೋಭೆ ತಂದಿವೆ. - ರುದ್ರೇಶ್.ಬಿ.ಅದರಂಗಿ, ಕೋಲಾರ, ಎಂ.ಜೆ.ರುದ್ರಮೂರ್ತಿ, ಚಿತ್ರದುರ್ಗ.(13-12-2013)

ಹರಿಹರನ 'ಗಿರಿಜಾಕಲ್ಯಾಣ' 'ಸುಧಾ' ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಕಾಣಿಸಿಕೊಂಡು ಮನೆಮಂದಿಗೆಲ್ಲ ಖುಷಿ ತಂದು ಕೊಟ್ಟಿದೆ. ಡಾ.ಜಿ.ಕೃಷ್ಣಪ್ಪನವರು ಹದವಾದ ಭಾಷೆಯಲ್ಲಿ ಮೂಲದ ಸ್ವಾರಸ್ಯಕ್ಕೆ ಭಂಗಬಾರದಂತೆ ಕಥೆ ಹೇಳಿದ್ದಾರೆ, ಮೂಲ ಕಾವ್ಯದ ಕಠಿಣಶಬ್ಧಗಳಿಗೆ ಅರ್ಥ ನೀಡಿರುವ 'ಸುಧಾ' ಪ್ರಯತ್ನ ಶ್ಲಾಘನೀಯ, ಜಿ.ಕೆ.ಶಿವಣ್ಣ ಚಿತ್ರಿಸಿರುವ ಸುಂದರ ಚಿತ್ರಗಳು ಕಾವ್ಯದ ಹಿನ್ನೆಲೆಯಲ್ಲಿ ಅಥೈಸಲು ಸಹಾಯಕವಾಗಿದೆ.
- ಪ್ರೋ.ಎಚ್.ಎಸ್.ಹರಿಶಂಕರ್, ಮೈಸೂರು/ಪ್ರಭುಪ್ರಸಾದ್ ನಡುತೋಟ ಶೃಂಗೇರಿ.(10-01-2013)

ಜಿ.ಕೃಷ್ಣಪ್ಪನವರ ಗದ್ಯಾನುವಾದ ಮೂಲಕ್ಕೆ ನಿಷ್ಠವಾಗಿದ್ದು, ಹೃದ್ಯವಾಗಿದೆ, ಜಿ.ಕೆ.ಶಿವಣ್ಣ ಅವರ ಸಾಂಪ್ರದಾಯಿಕ ಶೈಲಿಯ ಚಿತ್ರಗಳಂತೂ ಅದ್ಭುತವಾಗಿದ್ದವು.
- ಶೈಲಜಾ ಪ್ರಸಾದ್. ಹೆಚ್.ಹನುಮಂತರಾಯ, ಬೆಂಗಳೂರು/ ಸು.ವಿಜಯಲಕ್ಷ್ಮಿ, ಶಿವಮೊಗ್ಗ/ ಎಂ.ಬೆಳ್ಳುರಪ್ಪ, ಕೋಲಾರ/ ಪೊ. ಗುರುಲಿಂಗಪ್ಪ ಮಂಠಾಳೆ, ಬೀದರ/ ಎಸ್.ಲಕ್ಷ್ಮಿನರಸಿಂಹ ಚಾಮರಾಜನಗರ/ - ಜಿ.ಎನ್.ಪ್ರಸನ್ನ ಕುಮಾರ್, ತುಮಕೂರು. (31-01-2013)

ಹರಿಶ್ಚಂದ್ರ ಚಾರಿತ್ರದ ಬಗ್ಗೆ ಅಭಿಪ್ರಾಯಗಳು:

ಮನ ಕಲಕಿತು: ಸತ್ಯ ಹರಿಶ್ಚಂದ್ರ(ರಾಜ್. ಪಂಡರಿಬಾಯಿ)ನೋಡಿದಾಗಲೂ ನನಗೆ ಮನಸ್ಸು ಇಷ್ಟು ಕಲಕಿರಲಿಲ್ಲ, ಹರಿಶ್ಚಂದ್ರ ದಂಪತಿ, ಮಗು ಲೋಹಿತಾಶ್ವ ಅಡವಿಯಲ್ಲಿ ಪರಿತಪಿಸಿದ ವರ್ಣನೆ ಓದಿದಾಗ ತುಂಬಾ ಖೇದವಾಯಿತು. ಆ ವರ್ಣನೆಗೆ ಅಷ್ಟು ಶಕ್ತಿ ಇದೆ. ವಿಶ್ವಾಮಿತ್ರರ ಬಗ್ಗೆ ಅಷ್ಟೇ ಬೇಸರವೂ ಆಯಿತು. ಶ್ರೀರಾಮ, ಸೀತಾ. ಲಕ್ಷ್ಮಣರಿಗಿಂತ ಹರಿಶ್ಚಂದ್ರ, ಚಂದ್ರಮತಿ, ಲೋಹಿತಾಶ್ವರೇ ಹೆಚ್ಚು ಕಷ್ಟ ಅನುಭವಿಸಿದ್ದಾರೆ. ಎಂದನಿಸಿದ್ದು ನಿಜ. ಧಾರಾವಾಹಿಯ ವರ್ಣನೆ ಎಷ್ಟು ಮನಮೋಹಕವೋ ಅಷ್ಟೇ ಪ್ರಮಾಣದಲ್ಲಿ ಶಿವಣ್ಣ ಜಿ.ಕೆ.ಅವರ ಸಾಂದರ್ಭಿಕ ಚಿತ್ರಗಳೂ ಮೈ ಮರೆಸುತ್ತವೆ, ಕಣ್ಣು, ಮೂಗುಗಳನ್ನು ಅದೆಷ್ಟು ಅಕರ್ಷಕವಾಗಿ ಚಿತ್ರಿಸಿದ್ದಾರೆ. ವಾರದ ಇಡೀ ಕತೆಯನ್ನು ಒಂದು ಚಿತ್ರ ವಿವರಿಸಿ ಹೇಳಿದೆ, ಶಿವಣ್ಣ, ಕೃಷ್ಣಪ್ಪ, ಸುಧಾ ಮೂವರಿಗೂ ಧನ್ಯವಾದಗಳು - ಕೆ.ಎಂ,.ಮಧ್ವರಾಯ, ಬೆಂಗಳೂರು.

ದೇಸೀ ಸೊಗಡು: ಮೂಲ ಕಾವ್ಯದ ಸೊಗಡು ಮತ್ತು ಸಾರಕ್ಕೆ ಎನಿತಿಷ್ಟೂ ಕುಂದು ಬರದಂತೆ ಸರಳ ಗದ್ಯ ರೂಪದಲ್ಲಿ ವಿವರಿಸಿದ್ದು, ಪ್ರಧಾನ ಅಂಶವಾಗಿದ್ದಂತೆ, ಮೂಲ ಕಾವ್ಯದ ಮಹತ್ವದ ಸಾಲುಗಳನ್ನು ಕೆಲವಡೆ ಯಥಾವತ್ತಾಗಿ ಉಲ್ಲೇಖಿಸಿ ವಿವರಣೆಯನ್ನು ಕೊಟ್ಟಿದ್ದರಿಂದ ದೇಸಿಯ ಸಡಗರವನ್ನು ಪುನಃ 'ಸುಧಾ' ಓದುಗರಿಗೆ ನೀಡಿದ್ದು ಶ್ಲಾಘನೀಯ. ಈ ಕಥಾನಕಕ್ಕೆ ಶಿವಣ್ಣನವರ ಚಿತ್ರಗಳು ಜೀವಕಳೆ ತುಂಬಿವೆ.
- ಯು.ಎನ್.ಸಂಗನಾಳಮಠ, ಹೊನ್ನಾಳಿ.


ರೋಚಕ ಕಥಾನಕ: ಹರಿಶ್ಚಂದ್ರ ಚಾರಿತ್ರ' ಧಾರಾವಾಹಿ ಅತ್ಯುತ್ತಮವಾಗಿ ಮೂಡಿ ಬಂತು. ಕಾವ್ಯರೂಪದಲ್ಲಿ ಓದುವ, ಅರ್ಥ ಮಾಡಿ ಕೊಂಡು ಆನಂದಿಸುವ ಶಕ್ತಿ ಇಲ್ಲದ ನಮ್ಮಂತಹವರಿಗೆ ನಮ್ಮ ಓದಿಗೆ ದಕ್ಕುವಂತೆ ಗದ್ಯಕ್ಕೆ ಇಳಿಸಿ, ಈ ಕಥೆಯ ರೋಚಕತೆಯನ್ನು ಸೌಂದರ್ಯವನ್ನೂ, ಸವಿಯಲು ಅವಕಾಶ ಮಾಡಿ ಕೊಟ್ಟ ಲೇಖಕರಿಗೆ, ಅತ್ಯುತ್ತಮ ಚಿತ್ರಗಳಿಂದ ಸೊಗಸಾದ ಅರ್ಥ ಹೊಮ್ಮಿಸಿದ ಕಲಾವಿದ ಜಿ.ಕೆ, ಶಿವಣ್ಣನವರಿಗೂ ನಮ್ಮ ಮೆಚ್ಚಿನ 'ಸುಧಾ' ಪತ್ರಿಕೆಗೂ ಧನ್ಯವಾದ.- ನಾ.ಸು.ನಾಗೇಶ.ನಾಗಮಂಗಲ.

ಷಡಕ್ಷರಿ ಕಾವ್ಯ ಕಾದಂಬರಿಯಾಗಲಿ: ಮೂಲ ಕಾವ್ಯಕ್ಕೆ ಸರಿಸಮಯಾಗಿ ಭಾವ ಸಹಿತ, ಅರ್ಥ ಸಹಿತ, ಸಂದರ್ಭ ಸಹಿತ ಸರಳಗನ್ನಡದಲ್ಲಿ ಮೂಡಿಬಂದಿತು. ಪ್ರೌಢವಾದ ಕಾವ್ಯವು ಸರಳಗನ್ನಡದಲ್ಲಿ ರಸಾಸ್ವಾದವನ್ನುಂಟು ಮಾಡಿತು. ಶಿವಣ್ಣ ಅವರ ಕುಂಚ ಪೂರಕವಾಗಿತ್ತು. ಇದೇ ರೀತಿ ಮುಂದೆ ಮಹಾಕವಿ ಷಡಕ್ಷರಿಯ ಶಬರ ಶಂಕರ ವಿಲಾಸ, ರಾಜಶೇಖರ ವಿಲಾಸವನ್ನು ಧಾರಾವಾಹಿಯಾಗಿ ನೀಡಬೇಕೆಂದು ಮನವಿ.
- ರುದ್ರೇಶ್ .ಜಿ.ಅದರಂಗಿ, ಬೆಂಗಳೂರು

ನೆನಪಿನಲ್ಲಿ ಉಳಿಯುವಂಥದ್ದು: ಹರಿಶ್ಚಂದ್ರ ನಮ್ಮ ಬುದ್ಧಿ-ಭಾವಗಳನ್ನು ತೀಡಿದ ಅನನ್ಯ ಕೃತಿ. ಜಿ.ಕೃಷ್ಣಪ್ಪನವರು ಭಾವಪರವಶವಾಗುವಂತೆ ಮಾಡಿದ ಈ ಅಧುನಿಕ ಗದ್ಯವಾಹಿನಿ ಬಹುಕಾಲ ನೆನಪಿನಲ್ಲಿ ಉಳಿಯುತ್ತದೆ. ಪಠ್ಯಕ್ಕಾಗಿ ಈ ಕಾವ್ಯವನ್ನು ಓದಿದ್ದು ವೈದ್ಯರ ಒತ್ತಾಯದಿಂದ ಪಥ್ಯಕ್ಕಾಗಿ ಜೇನು ಸೇವಿಸಿದಂತೆ ಆಗಿತ್ತು. ಈಗ ಆ ಜೇನಿನ ನಿಜವಾದ ಸವಿ ಭಾಸವಾಯಿತು. ಧಾರಾವಾಹಿಯ ಜೊತೆ ಅರಳಿದ ಚಿತ್ರಗಳು ಜೇನಿಗೆ ಹಾಲು ಬೆರೆಸಿದಂತಿತ್ತು. - ರಾಜಕುಮಾರ ಸಂಕನಾಳ, ಸಂಕೇಶ್ವರ.

ಆಕರ್ಷಕ ಸ್ವರೂಪ: ರಾಘವಾಂಕನ ಕಾವ್ಯ, ಕೃಷ್ಣಪ್ಪ ಅವರ ಬರಹದ ಮೂಲಕ ಆಕರ್ಷಕ ಸ್ವರೂಪ ಪಡೆದಿದೆ. ವರ್ಣನೆ ಮನಮುಟ್ಟುವಂತಿತ್ತು. ಕಲ್ಪನೆಯ ಚಿತ್ರ ಡಾ.ರಾಜಕುಮಾರ್ ಅವರ ಸತ್ಯ ಹರಿಶ್ವಂದ್ರ ಚಿತ್ರವನ್ನು ನೆನಪಿಸಿತು. ಧಾರಾವಾಹಿ ಮುಗಿದದ್ದೇ ತಿಳಿಯಲಿಲ್ಲ. ಲೇಖಕರಿಗೆ, ಚಿತ್ರಕಲಾವಿದರಿಗೆ, ಸುಧಾ ವಾರಪತ್ರಿಕೆಗೆ ಧನ್ಯವಾದಗಳು.-
ಎಂ.ಮೃತ್ಯುಂಜಯಪ್ಪ, ಚಿತ್ರದುರ್ಗ,





ಚಿತ್ರ ಪಠ್ಯಗಳ ಪರಸ್ಪರ ಧ್ಯಾನ

– ಕೆ.ವಿ. ಸುಬ್ರಮಣ್ಯಂ

ಬಹಳ ಹಿಂದಿನಿಂದ ಕೇಳಿ ಬಂದಿರುವ ನಮ್ಮ ಪುರಾಣಗಳ ಪರಂಪರೆಯು ಬಹುಮಟ್ಟಿಗೆ ವಿಸ್ಮೃತಿಗೆ ಒಳಗಾಗಿರುವ ದೃಶ್ಯಕಲೆಯ ಸಂದರ್ಭದ ನಡುವೆ ನಾವಿದ್ದೇವೆ. ಹಾಗೆ ನೋಡಿದರೆ ಪ್ರಾಚೀನವೇ ಅಲ್ಲದೆ ಮಧ್ಯಯುಗದ ಹಿಂದೂ ಧರ್ಮದ ತಾತ್ವಿಕ, ಸಾಮಾಜಿಕ, ಸಾಂಸ್ಕೃತಿಕ ಜ್ಞಾನಗಳನ್ನು ಅರಗಿಸಿಕೊಂಡ ವಿಶ್ವಕೋಶಗಳೇ ಅವು. ಮೌಲಿಕವಾದ ಇಂತಹ ನಮ್ಮ ಪುರಾಣ, ಕಾವ್ಯಗಳನ್ನು ಅಧ್ಯಯನ ಮಾಡಿ ಪ್ರೀತಿಯಿಂದ ಚಿತ್ರಿಸಿದ್ದ ಎಂ.ಟಿ.ವಿ.ಆಚಾರ್ಯರ ದೃಶ್ಯಕಲಾ ಪರಂಪರೆಯ ಕೊಂಡಿಯಂತೆ ಕಾಣುವವರಲ್ಲಿ ಚಂದ್ರನಾಥ್, ನಂತರ ಜಿ.ಕೆ.ಶಿವಣ್ಣ ಗಣನೀಯವಾಗಿ ಕಾಣುತ್ತಾರೆ.

ಕಾಮಿಕ್ಸ್ ಚಿತ್ರಕಥಾನಕಗಳ ಪ್ರಕಾರದಲ್ಲಿ ಸಮಕಾಲೀನವಾಗಿ ಹಲವು ಸಾಧ್ಯತೆಗಳನ್ನು ಕೆಲವರು ನಮ್ಮ ನಡುವೆ ಪ್ರಯೋಗಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಹರಿಹರ ಮಹಾಕವಿಯ ಗಿರಿಜಾ ಕಲ್ಯಾಣ ಮತ್ತು ರಾಘವಾಂಕ ಕವಿಯ ಹರಿಶ್ಚಂದ್ರ ಚಾರಿತ್ರಗಳ ಹಳಗನ್ನಡ ಕಾವ್ಯಗಳನ್ನು ಹೊಸಕನ್ನಡಕ್ಕೆ ಜಿ. ಕೃಷ್ಣಪ್ಪನವರು ಸೊಗಸಾಗಿ ನಿರೂಪಿಸಿದ ಈ ಪಠ್ಯಕ್ಕೆ ಜಿ.ಕೆ. ಶಿವಣ್ಣನವರ ಚಿತ್ರಗಳಿರುವ 'ಮಹಾ ಕಾವ್ಯಗಳ ದೃಶ್ಯ ರೂಪಕ' ಅಕ್ಷರದ ಹಂಗು ತೊರೆದು ಪ್ರಕಟವಾಗುತ್ತಿದೆ. ಈ ಚಿತ್ರಗಳಲ್ಲಿ ರೇಖೆ, ಬಣ್ಣ, ರೂಪಕಗಳ ಸಂಯೋಜನೆಗಳನ್ನು ಜಿ.ಕೆ.ಶಿವಣ್ಣ ತಮ್ಮ ಆಶಯಕ್ಕೆ ಪೂರಕವಾಗಿ ದುಡಿಸಿಕೊಂಡಿದ್ದಾರೆ. ಹಲವು ರಸಗಳ ಭಾವಲೋಕವು ಗಮನಾರ್ಹವಾಗಿ ತೆರೆದುಕೊಂಡಿದೆ.

